

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಫ್ರಾನ್ಸ್ ದೇಶದಿಂದ ಒಂದು ಪತ್ರ

ಯಾರಾದರೂ ಪರದೇಶಕ್ಕೆ ಹೋಗುತ್ತಾರೆಂದರೆ ಒಂದು ಕಾಲದಲ್ಲಿ ಬೀಳ್ಕೊಡುಗೆ ಸಮಾರಂಭಗಳು ಏರ್ಪಾಡಾಗುತ್ತಿದ್ದವು. ಹಿಂದಿರುಗಿ ಬಂದಾಗ ಅನೇಕ ಅಭಿನಂದನಾ ಸಮಾರಂಭಗಳೂ ಜರುಗುತ್ತಿದ್ದವು. ಈಗ ಪರದೇಶಗಳಿಗೆ ಹೋಗಿ ಬರುವುದು ಒಂದು ವಿಶೇಷ ಸುದ್ದಿಯಾಗಿಯೇನೂ ಉಳಿದಿಲ್ಲ. ದಿನಬೆಳಗಾದರೆ ನಮ್ಮ ಯುವ ಸಾಫ್ಟ್‌ವೇರ್ ಇಂಜಿನಿಯರುಗಳು ಬೆಂಗಳೂರಿನಿಂದ ಒಂದಲ್ಲ ಒಂದು ವಿಮಾನ ಹತ್ತಿ ಇಳಿಯುತ್ತಲೇ ಇರುತ್ತಾರೆ. ವಿದೇಶಪ್ರವಾಸ ದೊಡ್ಡ ಸುದ್ದಿಯಾಗುವುದು ನಮ್ಮ ದೇಶದ ರಾಜಕಾರಣಿಗಳು ಇಂಗ್ಲೆಂಡ್/ಅಮೇರಿಕಾಯಾತ್ರೆ ಕೈಗೊಂಡಾಗ ಮಾತ್ರ. ಅವರು ಮೊನ್ನೆ ತಾನೇ ಚುನಾವಣೆಯಲ್ಲಿ ಗೆದ್ದುಬಂದಿರುವುದರಿಂದ ವಿದೇಶಪ್ರವಾಸದ ಮುಹೂರ್ತ ಇನ್ನೂ ಕೂಡಿಬಂದಿರುವುದಿಲ್ಲ. ಹೊಸ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಅವರ 'ಜೈತ್ರಯಾತ್ರೆ'ಗೆ ಅವಕಾಶ ಆಗುತ್ತದೆಯೋ ಇಲ್ಲವೋ ಕಾದುನೋಡಬೇಕಾಗಿದೆ.

ಎರಡು ದಿನಗಳ ಹಿಂದೆ ಕರ್ನಾಟಕದಲ್ಲಿ ಬಸವಜಯಂತಿ; ತನ್ನಿಮಿತ್ತ ರಜೆ. ಅದೂ 2ನೇ ಶನಿವಾರ ಮತ್ತು ಭಾನುವಾರದ ಮಾಮೂಲೀ ರಜೆಯ ಮುಂದುವರಿಕೆಯ ಭಾಗವಾಗಿ ಸೋಮವಾರವೇ ಬಂದದ್ದು ನಮ್ಮ ಜನರಿಗೆ ಮತ್ತಷ್ಟೂ ಸಂತೋಷಕ್ಕೆ ಕಾರಣವಾಗಿರಬೇಕು. ಸತತ ಮೂರು ದಿನಗಳ ರಜೆ. ಬಸವಣ್ಣ ಪ್ರತಿಪಾದಿಸಿದ ಕಾಯಕಕ್ಕೆ ಕೈಲಾಸವೇ ಗತಿ! ಫ್ರಾನ್ಸ್ ದೇಶದಲ್ಲೂ ಸಹ ಕಳೆದ ಗುರುವಾರದಿಂದ ಭಾನುವಾರದವರೆಗೆ ದೀರ್ಘಕಾಲದ ವಾರಾಂತ್ಯ ರಜೆ (long week-end). ಕ್ರೈಸ್ತ ಧರ್ಮೀಯರ ನಂಬುಗೆಯ ಪ್ರಕಾರ ಏಸುಕ್ರಿಸ್ತ ಸಮಾಧಿಯಿಂದ ಮೇಲೆದ್ದು ಬಂದು 40 ದಿನಗಳ ನಂತರ ಸ್ವರ್ಗಾರೋಹಣ ಮಾಡಿದ ದಿನ (ascension day) ಹೋದ ಗುರುವಾರ. ಧಾರ್ಮಿಕ ಹಬ್ಬಗಳು ನೌಕರಿಯಲ್ಲಿರುವವರಿಗೆ ರಜೆ ಪಡೆಯಲು ನೆರವಾಗಿವೆಯೇ ಹೊರತು ಧಾರ್ಮಿಕತೆಯನ್ನು ಮೂಡಿಸಲು ಆಗಿಲ್ಲ. ಆದಕಾರಣ ಈ ಧಾರ್ಮಿಕ ಹಬ್ಬಗಳಂದು ಕೊಡುವ ರಜೆಗಳನ್ನು ಕಡಿತಗೊಳಿಸಿ ಜನರನ್ನು ಹೆಚ್ಚು ಹೆಚ್ಚು ಕೆಲಸದಲ್ಲಿ ತೊಡಗಿಸಿ ಇತ್ತೀಚೆಗೆ ಮುಗ್ಗರಿಸಿರುವ ದೇಶದ ಆರ್ಥಿಕಪರಿಸ್ಥಿತಿಯನ್ನು ಸುಧಾರಿಸಬೇಕೆಂಬುದು ಇಲ್ಲಿಯ ಹೊಸ ಸರಕಾರದ ಚಿಂತನೆಯಾಗಿದೆ.

"Religion is not in the daily life of our people" ಎನ್ನುತ್ತಾಳೆ ಕ್ರೈಸ್ತಧರ್ಮೀಯಳಾದ ಶ್ರೀಮತಿ ನಿಕೋಲ್. ಫ್ರಾನ್ಸ್ ದೇಶವು ಬಹುತೇಕ ಕ್ಯಾಥೋಲಿಕ್ ಕ್ರೈಸ್ತರು ಇರುವ ದೇಶವಾದರೂ ಭಾನುವಾರದಂದು ಚರ್ಚುಗಳಿಗೆ ಹೋಗಿ ಪ್ರಾರ್ಥನೆ ಸಲ್ಲಿಸುವ ಶ್ರದ್ಧಾಳು ಜನರ ಸಂಖ್ಯೆ ಇತ್ತೀಚೆಗೆ ತೀರಾ ಕಡಿಮೆ. ವಿವಾಹ ಮತ್ತು ಮರಣದ ಸಂದರ್ಭಗಳಲ್ಲಿ ಮಾತ್ರ ಅನಿವಾರ್ಯವಾಗಿ ಹೋಗುತ್ತಾರೆ. ಹೀಗಾಗಿ ಪ್ಯಾರಿಸ್ ನಗರದಲ್ಲಿರುವ ನೂರಾರು ಚರ್ಚುಗಳು ಗತಕಾಲದ ಶ್ರದ್ಧಾಳು ಜನರ ಸ್ಮಾರಕಗಳಾಗಿ ಪರಿಣಮಿಸಿ ಯಾತ್ರಿಕರ ಪ್ರೇಕ್ಷಣೀಯ ತಾಣಗಳಾಗಿವೆ.

"ಆಸೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲಾ ಒಂದೇ, ಏನನೋದಿ ಏನ ಕೇಳಿ ಏನು ಫಲ?" ಎಂದು ವಿಷಾದಿಸಿದ್ದಾರೆ ಬಸವಣ್ಣನವರು. ಜಾತಿಯಿಂದ ಮೇಲೆನಿಸಿಕೊಂಡವರು ಎಷ್ಟೇ ಬಹುಶ್ರುತರಾಗಿದ್ದರೂ ಆಸೆಯಾಮಿಷಗಳಿಂದ ಸಂಪೂರ್ಣ ಹೊರತಲ್ಲ. ಅಂದರೆ ಕೀಳುಜಾತಿಯವನೆಂದು ಹೀಗಳಿಕೆಗೆ ಒಳಗಾದವನ ಮನಸ್ಸಿನಲ್ಲಿ ಆಸೆ-ಆಮಿಷ, ಕ್ರೋಧ, ವಿಷಯವಾಸನೆಗಳು ಇರುವಂತೆ ಮೇಲುಜಾತಿಯವರೆಂದು ಹೆಗ್ಗಳಿಕೆಗೆ ಪಾತ್ರರಾದವರ ಮನಸ್ಸಿನಲ್ಲಿಯೂ ಈ ಎಲ್ಲ ದುರ್ಗುಣಗಳು ಇರುತ್ತವೆ. ಆದಕಾರಣ ಹುಟ್ಟಿನಿಂದ ಯಾರೂ ಮೇಲಲ್ಲ, ಯಾರೂ ಕೀಳಲ್ಲ ಎಂದು ಬಸವಣ್ಣನವರ ವಾದ. ನಮ್ಮ ದೇಶದಲ್ಲಿರುವ ಜಾತಿಪದ್ಧತಿಯನ್ನು ಕುರಿತು ಹೇಳಿದ ಬಸವಣ್ಣನವರ ಈ ಮಾತನ್ನು ಎಲ್ಲ ದೇಶದ ಜನರ ಸ್ವಭಾವಗಳಿಗೂ ಅನ್ವಯಿಸಿ ಹೇಳಬಹುದು.

ಇಂಡೋ-ಫ್ರೆಂಚ್ ಸಾಂಸ್ಕೃತಿಕ ಸಂಸ್ಥೆಯ ಆಹ್ವಾನದ ಮೇರೆಗೆ ಕಳೆದ ವಾರ ಪ್ಯಾರಿಸ್‌ಗೆ ಬಂದಾಗ ಇಲ್ಲಿಯ ಇತ್ತೀಚಿನ ಕೆಲವು ವಿದ್ಯಮಾನಗಳ ಹಿನ್ನೆಲೆಯಲ್ಲಿ ನಮಗೆ ನೆನಪಾಗಿದ್ದು ಬಹಳ ವರ್ಷಗಳ ಹಿಂದೆ ಮೈಸೂರಿನಲ್ಲಿ ನಡೆದ ಒಂದು ಬ್ಯಾಂಕ್ ದರೋಡೆ. ರಾತ್ರಿ ಕಾವಲುಗಾರನನ್ನು ಸಾಯಿಸಿ ಬ್ಯಾಂಕಿನೊಳಗೆ ನುಗ್ಗಿ ಲಕ್ಷಾಂತರ ರೂ. ದೋಚಲಾಗಿತ್ತು. ಈ ಪ್ರಕರಣದ ತನಿಖೆ ನಡೆಸಿದವರು ಆಗಿನ ಹಿರಿಯ ಪೋಲೀಸ್ ಅಧಿಕಾರಿಗಳಾಗಿದ್ದ ನಿವೃತ್ತ ಐ.ಜಿ.ಪಿ ಎಲ್. ರೇವಣಸಿದ್ಧಯ್ಯನವರು. ಶ್ವಾನದಳದಿಂದ ದರೋಡೆಕೋರರ ಸುಳಿವು ಸಿಗಲಿಲ್ಲ. ಕೊಲೆಯಾಗಿದ್ದ ರಾತ್ರಿ ಕಾವಲುಗಾರನ ಮನೆಗೆ ಹೋಗಿ ಶೋಧಿಸಿದಾಗ ಅವರ ಕಣ್ಣಿಗೆ ಬಿದ್ದ ಒಂದು ಪತ್ತೇದಾರಿ ಕಾದಂಬರಿ ಕುತೂಹಲವನ್ನು ಕೆರಳಿಸಿತು. ಅದರ ಹೆಸರು "ಕೊಲೆಯಾದವನೇ ಕೊಲೆಗಾರ"! ಅದನ್ನು ಪೂರ್ಣ ಓದಿ ಅದರ ಆಧಾರದ ಮೇಲೆ ದರೋಡೆಕೋರನನ್ನು ದೋಚಿದ ಹಣ ಸಮೇತ ಪತ್ತೆ ಹಚ್ಚುವಲ್ಲಿ ಯಶಸ್ವಿಯಾದರು. ಆ ದರೋಡೆಕೋರ ಬೇರೆ ಯಾರೂ ಆಗಿರದೆ ರಾತ್ರಿಕಾವಲುಗಾರನೇ ಆಗಿದ್ದ. ಇನ್ನೊಬ್ಬ ವ್ಯಕ್ತಿಯನ್ನು ತಾನೇ ಕೊಂದು ಹಾಕಿ ಸತ್ತ ಹೆಣಕ್ಕೆ ತನ್ನ ಸಮವಸ್ತ್ರವನ್ನು ತೊಡಿಸಿ ಸುಟ್ಟು ಹಾಕಿ ಪೋಲೀಸರಿಗೆ ತನ್ನ ಮೇಲೆ ಯಾವುದೇ ಅನುಮಾನ ಬರದಂತೆ ಮಾಡಿ ಕಾವಲುಗಾರನೇ ಬ್ಯಾಂಕಿನಿಂದ ಲಕ್ಷಾಂತರ ರೂ. ಗಳನ್ನು ದೋಚಿಕೊಂಡು ಪರಾರಿಯಾಗಿದ್ದ!

- 2 -

ಮೇಲೆ ವಿವರಿಸಿದ ಬ್ಯಾಂಕ್ ದರೋಡೆಯಂತೆ ಇಲ್ಲಿ ಯಾವುದೋ ಬ್ಯಾಂಕ್ ದರೋಡೆಯಾಗಿರಬೇಕೆಂದು ನೀವು ಊಹಿಸಿದರೆ ನಿಮ್ಮ ಕಲ್ಪನೆ ತಪ್ಪು. ಯಾರ ಊಹೆಗೂ ನಿಲುಕದ ಒಂದು ಘಟನೆ ಇತ್ತೀಚೆಗೆ ಫ್ರಾನ್ಸ್ ದೇಶದಲ್ಲಿ ನಡೆದಿದೆ. ಇಲ್ಲಿಯ ಕೇಂದ್ರ ಸರಕಾರದಲ್ಲಿ ಹಣಕಾಸು ಇಲಾಖೆಗೆ ಸಂಬಂಧಿಸಿದಂತೆ ಇಬ್ಬರು ಮಂತ್ರಿಗಳು ಇರುತ್ತಾರೆ - ಒಬ್ಬರು Budget Minister ಮತ್ತೊಬ್ಬರು ಅವರ ಮೇಲಿರುವ Finance Minister. ಒಂದು ವರ್ಷದ ಹಿಂದೆ ಹೊಸದಾಗಿ ಅಧಿಕಾರಕ್ಕೆ ಬಂದು ಬಜೆಟ್ ಮಂತ್ರಿಯಾದ ಜಿರೋಮೆ ಕಹುಜಾಕ್ (Jerome Cahuzac) ದಕ್ಷತೆಗೆ ಹೆಸರಾಗಿದ್ದ. ವಿದೇಶೀ ಬ್ಯಾಂಕುಗಳಲ್ಲಿ ಕಪ್ಪುಹಣ ಕೂಡಿಟ್ಟು ತೆರಿಗೆ ವಂಚನೆ ಮಾಡುವ ಶ್ರೀಮಂತ ಫ್ರೆಂಚ್ ನಾಗರಿಕರ ಮೇಲೆ ಹದ್ದಿನ ಕಣ್ಣು ಇಟ್ಟಿದ್ದ. ಆದರೆ ತೆರಿಗೆ ವಂಚಕರ ಬೆನ್ನುಹತ್ತಿದ್ದ ಈ ಬಜೆಟ್‌ಮಂತ್ರಿಯೇ ಮಹಾ ತೆರಿಗೆ ವಂಚಕನೆಂದು ಒಂದು ತಿಂಗಳ ಹಿಂದೆ ಮಾಧ್ಯಮದವರು ಬಯಲಿಗೆಳೆದಿದ್ದಾರೆ. ಸ್ವಿಸ್‌ಬ್ಯಾಂಕಿನಲ್ಲಿ ಸುಮಾರು 20 ಮಿಲಿಯನ್ ಡಾಲರ್‌ಗಳಷ್ಟು ಕಪ್ಪು ಹಣವನ್ನು ಇಟ್ಟಿದ್ದಾನೆಂದು ಮಾಧ್ಯಮದವರ ಆರೋಪ. ಈ ಆರೋಪವನ್ನು ಪೂರ್ಣ ತಳ್ಳಿಹಾಕಲಾಗದೆ 9 ಲಕ್ಷ ಡಾಲರ್ ಮಾತ್ರ ಇಟ್ಟಿರುವುದಾಗಿ ಈ ಮಂತ್ರಿಯು ಬಹಿರಂಗವಾಗಿ ಒಪ್ಪಿಕೊಂಡು ರಾಜೀನಾಮೆ ನೀಡಿದ್ದು ರಾಜಕೀಯ ರಂಗದಲ್ಲಿ ಸಂಚಲನವನ್ನುಂಟುಮಾಡಿದೆ. ಈ ಸಂಬಂಧವಾಗಿ ವಿಚಾರಣೆ ನಡೆಯುತ್ತಿದ್ದು ಅಪರಾಧಿಯೆಂದು ನ್ಯಾಯಾಲಯದಲ್ಲಿ ಸಾಬೀತಾದರೆ ಈತನು ಐದು ವರ್ಷ ಜೈಲು ಶಿಕ್ಷೆ ಅನುಭವಿಸುವುದರ ಜೊತೆಗೆ ಸುಮಾರು 5 ಲಕ್ಷ ಡಾಲರ್ ದಂಡ ತೆರಬೇಕಾಗುತ್ತದೆ.

ಭಾರೀ ಪ್ರಮಾಣದ ತೆರಿಗೆ ವಂಚನೆಯ ಈ ಪ್ರಕರಣವು ಫ್ರಾನ್ಸ್ ಸರ್ಕಾರದ ಬುಡವನ್ನೇ ಅಲ್ಲಾಡಿಸುವಂತೆ ಮಾಡಿದೆ. ಮೊದಲೇ ಈ ದೇಶದ ಜನರಿಗೆ ಶ್ರೀಮಂತ ರಾಜಕಾರಣಿಗಳನ್ನು ಕಂಡರೆ ಆಗುವುದಿಲ್ಲ. ಜನರ ವಿಶ್ವಾಸವನ್ನು ಉಳಿಸಿಕೊಳ್ಳುವ ಸಲುವಾಗಿ ಸರಕಾರವು ಹೊಸದಾಗಿ ಒಂದು ಮಸೂದೆಯನ್ನು ಪಾರ್ಲಿಮೆಂಟ್ ಮುಂದೆ ತರಲು ಸಿದ್ಧತೆ ನಡೆಸಿದೆ. ಮಸೂದೆ ಅಂಗೀಕಾರಗೊಂಡು ಹೊಸ ಕಾಯಿದೆಯು ಜಾರಿಗೆ ಬಂದರೆ ಎಲ್ಲ ಪಾರ್ಲಿಮೆಂಟ್ ಸದಸ್ಯರು ಮತ್ತು ಉನ್ನತ ಸರಕಾರೀ ಅಧಿಕಾರಿಗಳು ಅಧಿಕಾರಕ್ಕೆ ಬಂದ ಮತ್ತು ಅಧಿಕಾರದಿಂದ ನಿರ್ಗಮಿಸುವ ವೇಳೆಯಲ್ಲಿ ಇರುವ ತಮ್ಮ ಆಸ್ತಿಪಾಸ್ತಿಗಳನ್ನು ಬಹಿರಂಗವಾಗಿ ಘೋಷಣೆ ಮಾಡಬೇಕಾಗುತ್ತದೆ. ತಪ್ಪಿದಲ್ಲಿ ಮೂರು ವರ್ಷ ಜೈಲು ಶಿಕ್ಷೆ ಮತ್ತು 50 ಸಾವಿರ ಡಾಲರ್ ದಂಡ! ಮಂತ್ರಿಗಳೇನಾದರೂ ತಪ್ಪು ಮಾಹಿತಿಯನ್ನು ಕೊಟ್ಟಿದ್ದು ಕಂಡುಬಂದರೆ ಐದು ವರ್ಷ ಜೈಲು ಶಿಕ್ಷೆ ಮತ್ತು 75 ಸಾವಿರ ಡಾಲರ್ ದಂಡ!

ಭ್ರಷ್ಟಾಚಾರವು ತನ್ನ ಕಬಂಧ ಬಾಹುಗಳನ್ನು ಸಪ್ತಸಾಗರದಾಚೆಗೂ ಚಾಚಿದೆ ಎಂಬುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ಆದರೆ ಒಂದೇ ಒಂದು ವ್ಯತ್ಯಾಸ. ಅದೆಂದರೆ ಈ ದೇಶಗಳಲ್ಲಿರುವ ಪ್ರಜ್ಞಾವಂತ ಜನರು. ಇಲ್ಲಿಯ ರಾಜಕಾರಣಿಗಳಿಗೆ ಜನರ ಮೇಲಿರುವ ಭಯ. ಭ್ರಷ್ಟರಾಜಕಾರಣಿಗಳನ್ನು ಮುಖಮೋರೆ ನೋಡದೆ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಜೈಲಿಗೆ ಹಾಕುವ ಬಿಗಿಯಾದ ಕಾನೂನು ವ್ಯವಸ್ಥೆ. ಜೈಲಿನಿಂದ ಹೊರಬಂದ ಭ್ರಷ್ಟ ಮಂತ್ರಿಗಳಿಗೆ ಆರತಿ ಎತ್ತಿ ಸ್ವಾಗತಿಸುವ ಸು(ಅ)ಮಂಗಲೆಯರು ಈ ದೇಶದಲ್ಲಿ ಇಲ್ಲ!

ಪ್ಯಾರಿಸ್
16.5.2013

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ